ಅ) 2004ನೇ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯ್ತಿಗೆ ರಾಜ್ಯ ಬಿಡುಗಡೆ ಮಾಡಬೇಕಾದ ಹಣ ಎಷ್ಟು ?

ಆ) 2005ನೇ ಸಾಲಿನಲ್ಲಿ ಜೂನ್ ವರೆಗೆ ಬಿಡುಗಡೆಯಾದ ಹಣ ಎಷ್ಟು ?

ಡಾ. ಹೆಚ್. ಸಿ. ಮಹದೇವಪ್ಪ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು:

ಅ) 2004ನೇ ಸಾಲಿನಲ್ಲಿ ಪ್ರತಿ ಗ್ರಾಮಪಂಚಾಯ್ತಿಗೆ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ಗ್ರಾಮಪಂಚಾಯ್ತಿಗಳ ಪರವಾಗಿ ಸಂಬಂಧಿಸಿದ ಗಳಿಗೆ ಹಾಗೂ ಗ್ರಾಮಪಂಚಾಯ್ತಿಗೆ ನೇರವಾಗಿ ಒಟ್ಟಾರೆ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) 2005–06ನೇ ಸಾಲಿಗೆ ಪ್ರತಿ ಗ್ರಾಮಪಂಚಾಯ್ತಿಗೆ ರೂ. 5.00 ಲಕ್ಷಗಳನ್ನು ಒದಗಿಸಲಾಗಿದ್ದು, 2005ನೇ ಏಪ್ರಿಲ್, ಮೇ, ಹಾಗೂ ಜೂನ್ ಅಂತ್ಯದ ಮೊದಲನೆ ತ್ರೈಮಾಸಿಕ ಕಂತು ರೂ. 1.25 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

4995 (5976) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗದಲ್ಲಿ ಪ್ರಸಕ್ತ ಸಾಲಿನಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಉದ್ದೇಶಿಸಿರುವುದು ನಿಜವೇ ಹಾಗೂ ಕೊರತೆ ಇರುವ ಸೌಲಭ್ಯಗಳೇನು;

ಆ) ಈ ಸಾಲಿನಲ್ಲಿ ವೈದ್ಯಕೀಯ ಕಾಲೇಜಿಗೆ ಸೌಲಭ್ಯ ಒದಗಿಸಲು ತೆಗೆದಿರಸಲಾದ ಹಣ ಎಷ್ಟು : ಇದುವರೆಗೆ ಖರ್ಚು ಮಾಡಿರುವ ಹಣ ಎಷ್ಟು :

ಇ) ದಂತ ವೈದ್ಯಕಾಲೇಜು ಸ್ಥಾಪನೆಗೆ ಮೆಡಿಕಲ್ ಕೌನ್ಸಿಲ್‌ಗೆ ಅರ್ಜಿ ಸಲ್ಲಿಸಲಾಗಿದೆಯೇ :

ಈ) ಈ ಕೌನ್ಸಿಲ್‌ನ ಸಮಿತಿ ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಿದೆಯೇ : ಹೌದಾದಲ್ಲಿ, ಈ ವರದಿಯ ಸಾರಾಂಶ ಏನು?

ಶ್ರೀ ಇಕ್ಬಾಲ್ ಆನ್ಸಾರಿ ವೈದ್ಯಕೀಯ ಶಿಕ್ಷಣ ಸಚಿವರು. :

ಅ) ಶಿವಮೊಗ್ಗದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಅನುಮತಿಗಾಗಿ ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿತ್ತು, ಸರ್ಕಾರ ಈ ಕಾಲೇಜನ್ನು ಸ್ಥಾಪಿಸಲು ನಿರ್ಣಯಿಸುವಷ್ಟರಲ್ಲಿ ಅರ್ಜಿ ಸಲ್ಲಿಸಲು ನಿರ್ಧರಿತಗೊಂಡ ದಿನಾಂಕ ಕೊನೆಗೊಂಡಿತ್ತು . 2006–07 ನೇ ಶೈಕ್ಷಣಿಕ ವರ್ಷಕ್ಕೆ ಅರ್ಜಿ ಸಲ್ಲಿಸುವಂತೆ ಸೂಚಿಸಿದೆ. ಆದಾಗ್ಯೂ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಅಗತ್ಯವಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ ಮತ್ತು ಬೋಧನಾ ಸಿಬ್ಬಂದಿಯನ್ನು ನೇಮಿಸಲಾಗುತ್ತಿದೆ.

ಆ) 2005–06 ನೇ ಸಾಲಿನ ಆಯವ್ಯಯದಲ್ಲಿ ಆರು ಹೊಸ ವೈದ್ಯಕೀಯ ಸರ್ಕಾರ ಕಾಲೇಜುಗಳ ಸ್ಥಾಪನೆಗಾಗಿ 30 ಕೋಟಿ ರೂ.ಗಳನ್ನು ಕಾಮಗಾರಿಗಳಿಗಾಗಿ ಮತ್ತು 6095 ಕೋಟಿ ರೂ.ಗಳನ್ನು ವೈದ್ಯಕೀಯ ಉಪಕರಣಗಳ ಸಂಗ್ರಹಣೆಗಾಗಿ ವಿತರಿಸಲಾಗಿದೆ.

ಇ) ಇಲ್ಲ

ಈ) ಇಲ್ಲ

4996 (5977) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ವಲಯ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕ್ರೀಡಾಕೂಟವನ್ನು ಜುಲೈ ತಿಂಗಳಿನಲ್ಲಿ ನಡೆಸುವ ಉದ್ದೇಶವಿದೆಯೇ;

ಆ) ಮಲೆನಾಡು ಪ್ರದೇಶದಲ್ಲಿ ವಿಪರೀತ ಮಳೆ ಇರುವುದರಿಂದ ಕ್ರೀಡಾಕೂಟ ನಡೆಸಲು ತೊಂದರೆಯಾಗುವುದರ ಜೊತೆಗೆ ಸ್ಪರ್ಧಾಳುಗಳು ಜಾರಿಕೆಯಿಂದ ಬಿದ್ದು ಗಾಯಗೊಳ್ಳುವ ಸಂಭವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :